# ಹರಿದಾಸ ಸಾಹಿತ್ಯಕ್ಕೆ ಮಾಧ್ವ ಯತಿಗಳ ಕೊಡುಗೆ

ಶ್ರೀನಿವಾಸ ಫಡ್ನೀಸ್

ಕನ್ನಡ ಹಾಗೂ ಸಂಸ್ಕೃತ ಉಪನ್ಯಾಸಕರು, ಬಸವೇಶ್ವರ ಕಲಾ, ವಿಜ್ಞಾನ ಹಾಗೂ ವಾಣಿಜ್ಯ ಮಹಾವಿದ್ಯಾಲಯ, ವಿದ್ಯಾಗಿರಿ, ಬಾಗಲಕೋಟೆ.

DOI: https://doi.org/10.5281/zenodo.18785569

## ABSTRACT:

ಹರಿದಾಸ ಸಾಹಿತ್ಯ ಪರಂಪರೆಯು ಮಾಧ್ವ ಯತಿಗಳ ಕೊಡುಗೆಯಿಂದಾಗಿ ಅತ್ಯಂತ ಶ್ರೀಮಂತಗೊಂಡಿದೆ. ದ್ವೈತ ಸಿದ್ಧಾಂತದ ಕ್ಲಿಷ್ಟಕರ ತತ್ವಗಳನ್ನು ಜನಸಾಮಾನ್ಯರಿಗೆ ಅರ್ಥವಾಗುವಂತೆ ಕನ್ನಡದಲ್ಲಿ ಪ್ರಚುರಪಡಿಸುವುದು ಈ ಯತಿಗಳ ಪ್ರಮುಖ ಉದ್ದೇಶವಾಗಿತ್ತು. ಹರಿದಾಸ ಪಂಥದ ಮೂಲಪುರುಷರಾದ ನರಹರಿತೀರ್ಥರು, ಪಿತಾಮಹರೆನಿಸಿದ ಶ್ರೀಪಾದರಾಜರು, ದಾಸಕೂಟವನ್ನು ಸಾಂಸ್ಥೀಕರಿಸಿದ ವ್ಯಾಸತೀರ್ಥರು, ವಾದಿರಾಜರು ಹಾಗೂ ವ್ಯಾಸತತ್ವಜ್ಞತೀರ್ಥರಂತಹ ಮಹಾನ್ ಯತಿಗಳು ಕೀರ್ತನೆ, ಸುಳಾದಿ ಮತ್ತು ಉಗಾಭೋಗಗಳ ಮೂಲಕ ಭಕ್ತಿಮಾರ್ಗವನ್ನು ತೋರಿಸಿಕೊಟ್ಟರು. ಸಂಸ್ಕೃತದಲ್ಲಿದ್ದ ವೇದ-ಉಪನಿಷತ್ತುಗಳ ಸಾರವನ್ನು ಸರಳ ಕನ್ನಡದಲ್ಲಿ ನೀಡುವ ಮೂಲಕ ಭಾಷೆ ಮತ್ತು ಸಂಸ್ಕೃತಿಯನ್ನು ಇವರು ಬೆಳೆಸಿದರು. ಹರಿಭಕ್ತಿ, ನೈತಿಕ ಮೌಲ್ಯಗಳು ಮತ್ತು ಸಾಮಾಜಿಕ ಕಳಕಳಿಯನ್ನು ಒಳಗೊಂಡ ಇವರ ಸಾಹಿತ್ಯವು ದಾಸಸಾಹಿತ್ಯದ ಬುನಾದಿಯಾಗಿದೆ. ಹರಿದಾಸ ಸಾಹಿತ್ಯದ ಉಗಮ ಮತ್ತು ವಿಕಾಸದಲ್ಲಿ ಈ ಪ್ರಮುಖ ಮಾಧ್ವ ಯತಿಗಳು ವಹಿಸಿದ ನಿರ್ಣಾಯಕ ಪಾತ್ರ ಹಾಗೂ ಅವರ ಸಾಹಿತ್ಯಿಕ ಕೊಡುಗೆಗಳ ವಿಶಿಷ್ಟತೆಯನ್ನು ಇಲ್ಲಿ ವಿಶ್ಲೇಷಿಸಲಾಗಿದೆ.

## KEYWORDS:

ಹರಿದಾಸ ಸಾಹಿತ್ಯ, ಮಾಧ್ವ ಯತಿಗಳು, ದ್ವೈತ ಸಿದ್ಧಾಂತ, ಭಕ್ತಿಪಂಥ, ಕೀರ್ತನೆಗಳು.

**ಪೀಠಿಕೆ:**

ಮಧ್ವ ಯತಿಗಳು ಹರಿದಾಸ ಸಾಹಿತ್ಯದ ಮೂಲ ಪುರುಷರು ಮತ್ತು ಪ್ರೇರಕರು. ದ್ವೈತ ಶಾಸ್ತ್ರದ ಪ್ರಚಾರಕ್ಕಾಗಿ ಜನಸಾಮಾನ್ಯರ ಭಾಷೆಯಾದ ಕನ್ನಡದಲ್ಲಿ ಭಕ್ತಿಯನ್ನು ಹರಡಲು ನರಹರಿತೀರ್ಥರು, ಶ್ರೀಪಾದರಾಜರು ಮತ್ತು ವ್ಯಾಸತೀರ್ಥರು ದಾಸಸಾಹಿತ್ಯವನ್ನು ರೂಪಿಸಿ ಪುರಂದರ, ಕನಕದಾಸರಂತಹ ಮಹಾನ್ ದಾಸರಿಗೆ ದೀಕ್ಷೆ ನೀಡಿ ಸಾಹಿತ್ಯವನ್ನು ಶ್ರೀಮಂತಗೊಳಿಸಿದರು. ಹರಿದಾಸ ಎಂಬ ಪದವೇ ಮಹತ್ವಪೂರ್ಣವಾದುದು. ಸದಾಕಾಲ ಹರಿನಾಮ ಸ್ಮರಣೆ ಮಾಡುವವರೇ ಹರಿದಾಸರು. ಮಧ್ವಾಚಾರ್ಯರು ಪ್ರತಿಪಾದಿಸಿದ ದ್ವೈತ ಸಿದ್ಧಾಂತವು (ಜೀವಾತ್ಮ-ಪರಮಾತ್ಮ ಭಿನ್ನ, ಜಗತ್ತು ಸತ್ಯ), ಪಂಚತಾರತಮ್ಯಗಳು, ಹರಿ ಸರ್ವೋತ್ತಮ, ಭಕ್ತಿ ಮತ್ತು ಜ್ಞಾನದ ಮೂಲಕ ಮಾತ್ರ ಮೋಕ್ಷ ಸಾಧ್ಯವೆಂಬುದು, ದೇವರು ಬಿಂಬ ಮತ್ತು ಜೀವಾತ್ಮ ಪ್ರತಿಬಿಂಬ, ಜೀವಾತ್ಮ ಪರಮಾತ್ಮನ ಅಧೀನನಾಗಿದ್ದಾನೆ ಎಂಬ ಮುಂತಾದ ದ್ವೈತ ತತ್ವಗಳು ಹರಿದಾಸ ಸಾಹಿತ್ಯದ ಅಡಿಪಾಯಗಳಾದವು. ಪೀಠಾಧಿಪತಿಗಳು ಕೂಡಾ ತಾಳ ತಂಬೂರಿಯೊಂದಿಗೆ ರಂಗವಿಠಲ, ಶ್ರೀಕೃಷ್ಣ, ಹಯವದನ ಮುಂತಾದ ಅಂಕಿತಗಳ ಮೂಲಕ ಕೃತಿಗಳನ್ನು ರಚನೆ ಮಾಡಿದ್ದು ಇವತ್ತು ಹರಿದಾಸ ಸಾಹಿತ್ಯವು ಉಳಿಯುವುದಕ್ಕೆ ಕಾರಣವಾಗಿದೆ.

**ಹರಿದಾಸ ಸಾಹಿತ್ಯಕ್ಕೆ ಮಾಧ್ವ ಯತಿಗಳ ಕೊಡುಗೆ:**

**1) ಶ್ರೀ ನರಹರಿತೀರ್ಥರು:**

ಒಬ್ಬ ದ್ವೈತ ತತ್ವಜ್ಞಾನಿ ಹಾಗೂ ಶ್ರೀಮದಾಚಾರ್ಯರ ಶಿಷ್ಯರಲ್ಲಿ ಒಬ್ಬರು. ಹರಿದಾಸ ಚಳುವಳಿಯ ಮೂಲ ಪುರುಷರೆಂದು ಇವರನ್ನು ಪರಿಗಣಿಸಲಾಗಿದೆ. ಇವರು 'ರಘುಕುಲತಿಲಕ' ಎಂಬ ಕಾವ್ಯನಾಮದ ಮೂಲಕ ಕೆಲವು ಹಾಡುಗಳನ್ನು ರಚಿಸಿದ್ದಾರೆ.

"ಎಂತು ಮರುಳಾದೆ ನಾನೆಂತು ಮರುಳಾದೆ, ಸಂತತ ಪೊರೆ ರಘುಕುಲತಿಲಕ"

ಎಂಬುದು ಇವರ ಪ್ರಸಿದ್ಧ ಕೀರ್ತನೆಯಾಗಿದೆ. ಈ ಕೀರ್ತನೆಯು ಲೌಕಿಕ ಆಸೆಗಳ ಕಡೆಗೆ ವಾಲಿದ ಮನಸ್ಸಿನ ಸ್ಥಿತಿಯನ್ನು, ದೇವರನ್ನು ಮರೆತು ವಿಷಯಲಂಪಟನಾದ ಮಾನವನ ದುಃಖದ ಸನ್ನಿವೇಶವನ್ನು ವ್ಯಕ್ತಪಡಿಸುತ್ತದೆ ಮತ್ತು ಭಗವಂತನಾದ ಶ್ರೀರಾಮನಲ್ಲಿ ಶರಣಾಗತಿಯನ್ನು ಕೋರುವ ಒಂದು ಭಕ್ತಿಗೀತೆಯಾಗಿದೆ.

"ಹರಿಯೇ ಇದು ನಿನಗೆ ಸರಿಯೇ" ಎಂಬ ಕೀರ್ತನೆಯು ಭಕ್ತನೊಬ್ಬನು ಭಗವಂತನಾದ ಶ್ರೀಹರಿಯನ್ನು ಪ್ರಶ್ನಿಸುತ್ತಿರುವಂತೆ ರಚಿಸಲ್ಪಟ್ಟಿದ್ದು, "ಓ ಭಗವಂತ ನೀನು ದಯೆ ತೋರದಿರುವುದು ಸರಿಯೇ? ನಿನ್ನ ಪತಿತಪಾವನ ಕೀರ್ತಿ ನಿಜವೇ? ಭಕ್ತವತ್ಸಲ ಎಂಬ ನಿನ್ನ ನಾಮ ವ್ಯರ್ಥವಾಗುತ್ತಿದೆಯೇ?" ಎಂದು ಭಕ್ತನು ದೇವರನ್ನು ನೋವಿನಿಂದ ಪ್ರಶ್ನಿಸುತ್ತಾ ತನ್ನನ್ನು ಕರುಣಿಸಿ ಕಾಪಾಡಬೇಕೆಂದು ಭಕ್ತಿಯಿಂದ

ಬೇಡಿಕೊಳ್ಳುತ್ತಾನೆ.

**2) ಶ್ರೀಪಾದರಾಜರು:**

ಶ್ರೀಪಾದರಾಜರು ಸುಮಾರು 14ನೇ ಶತಮಾನದಲ್ಲಿ ಅವತರಿಸಿದ್ದ ಮಹಾನುಭಾವರು. ಮಧ್ವಾಚಾರ್ಯರ ಪರಂಪರೆಯಲ್ಲಿ ಬಂದ ಇವರು, ಆಗಿನ ಕಾಲದಲ್ಲಿ ಕನ್ನಡವೆಂದರೆ ಮೂಗು ಮುರಿಯುತ್ತಿದ್ದ ವಾತಾವರಣದಲ್ಲಿ ಸಕಲ ವೇದಗಳ, ಉಪನಿಷತ್ತುಗಳ, ಮಧ್ವಾಚಾರ್ಯರ ತತ್ವವಾದವನ್ನು ಸಂಸ್ಕೃತ ಭಾಷೆಯ ಹಾಗೂ ಶಾಸ್ತ್ರದ ಅರಿವಿಲ್ಲದ ಸಾಮಾನ್ಯ ಜನರಿಗೋಸ್ಕರವಾಗಿ ಕನ್ನಡದಲ್ಲಿ ರಚಿಸಿದರು. ಹರಿದಾಸ ಸಾಹಿತ್ಯದ ಪಿತಾಮಹರಾಗಿ ದ್ವೈತ ವೇದಾಂತ ತತ್ವಗಳನ್ನು ಸರಳ ಕನ್ನಡದಲ್ಲಿ ದೇವರ ನಾಮಗಳ ಮೂಲಕ ಜನರಿಗೆ ತಲುಪಿಸಿ ಸಾಹಿತ್ಯಕ್ಕೆ ಭದ್ರ ಬುನಾದಿ ಹಾಕಿದರು. ಮಧ್ವಾಚಾರ್ಯರ ತತ್ವಗಳನ್ನು ಜನಪ್ರಿಯಗೊಳಿಸಲು ಭಾಗವತದಂತಹ ಗ್ರಂಥಗಳನ್ನು ಸರಳ ಕನ್ನಡಕ್ಕೆ ಅನುವಾದಿಸಿ ದಾಸಸಾಹಿತ್ಯಕ್ಕೆ ಹೊಸ ರೂಪ ನೀಡಿದರು. ಹಾಡುಗಳ ಮೂಲಕ ದ್ವೈತ ತತ್ವಗಳನ್ನು ಜನರಿಗೆ ಮನವರಿಕೆ ಮಾಡಿಕೊಟ್ಟರು. ಗಾಯನ, ನರ್ತನ, ಭಜನೆಗಳಿಗೆ ಪ್ರಾಮುಖ್ಯತೆ ನೀಡಿದರು.

ಶ್ರೀಪಾದರಾಜರು ಶ್ರೀ ಮಧ್ವಾಚಾರ್ಯರನ್ನು ಕುರಿತು ರಚಿಸಿದ "ಮಧ್ವನಾಮ" ಕೃತಿಯು ಹರಿದಾಸ ಸಾಹಿತ್ಯದಲ್ಲಿಯೇ ಪ್ರಸಿದ್ಧವೂ ಪ್ರಶಸ್ತವೂ ಆಗಿದೆ. ವಾಯುದೇವರು ತ್ರೇತಾಯುಗದಲ್ಲಿ ಹನುಮಂತನಾಗಿಯೂ, ದ್ವಾಪರಯುಗದಲ್ಲಿ ಭೀಮಸೇನನಾಗಿಯೂ, ಕಲಿಯುಗದಲ್ಲಿ ಮಧ್ವಾಚಾರ್ಯರಾಗಿಯೂ ಅವತಾರವೆತ್ತಿ ಬಂದರೆಂದು ಮಾಧ್ವರ ನಂಬಿಕೆ. ಇಲ್ಲಿ ಒಂದೊಂದು ಅವತಾರದ ವರ್ಣನೆಯನ್ನು ಶ್ರೀಪಾದರಾಜರು ಈ ಕೀರ್ತನೆಯಲ್ಲಿ ಅಭಿಮಾನದಿಂದ ಚಿತ್ರಿಸುತ್ತಾರೆ.

"ಜಯ ಜಯ ಜಯತ್ರಾಣ ಜಗದೊಳಗೆ ಸುತ್ರಾಣ ಅಖಿಲಗುಣ ಸದ್ಧಾಮ ಮಧ್ವನಾಮ"

ಎಂಬ ಪಲ್ಲವಿಯಲ್ಲಿಯೇ ಈ ಕೃತಿಯ ಶ್ರೇಷ್ಠತೆಯನ್ನು ವ್ಯಕ್ತಪಡಿಸಲಾಗಿದೆ. ಪ್ರಾರಂಭದ ಕೆಲವು ನುಡಿಗಳಲ್ಲಿ ಜೀವೋತ್ತಮರೆನಿಸಿದ ವಾಯುದೇವರ ಮಹತ್ವವನ್ನೆಲ್ಲ ತಿಳಿಯಹೇಳಿ, ಅನಂತರ ಆತನು ತ್ರೇತೆಯಲ್ಲಿ ರಘುಪತಿಯ ಸೇವೆ ಮಾಡುವವನೆಂದು ಹೇಳಿದ್ದಾರೆ. ಹನುಮಂತನು ಹುಟ್ಟಿದ ಕೂಡಲೇ ಸೂರ್ಯಬಿಂಬಕ್ಕೆ ಲಂಘಿಸಿದ ಪ್ರತಾಪವನ್ನು, ಸೂರ್ಯನಿಂದ ವ್ಯಾಕರಣಾದಿಗಳನ್ನು ಕಲಿತ ಅವನ ಅಸೀಮ ಪಾಂಡಿತ್ಯವನ್ನು ಪ್ರಸ್ತಾಪಿಸಿರುವರು.

ಶ್ರೀಪಾದರಾಜರ 'ಭ್ರಮರಗೀತೆ' ಭಾಗವತದಲ್ಲಿ ಉಕ್ತವಾಗಿರುವ ಭ್ರಮರಗೀತೆಯ ಪ್ರಸಂಗದಂತೆ ಪ್ರಾರಂಭವಾದರೂ, ವಿಷಯ ಪ್ರತಿಪಾದನೆಯಲ್ಲಿ ಅನೇಕ ಸ್ವಂತ ಕಲ್ಪನೆಗಳು ಬೆರೆತು ಒಟ್ಟು ರಚನೆಯೇ ಒಂದು ಸ್ವತಂತ್ರವಾದ ಭಾವಗೀತೆಯಂತೆ ರಸವತ್ತಾಗಿದೆ. ಸಂಸ್ಕೃತ ಮೂಲದಲ್ಲಿ 17 ಶ್ಲೋಕಗಳಿದ್ದರೆ, ಪ್ರಕೃತ ಕನ್ನಡ ರಚನೆಯಲ್ಲಿ ಅಷ್ಟಪಾದಗಳುಳ್ಳ 9 ನುಡಿಗಳಿವೆ. ಗೋಕುಲಕ್ಕೆ ಬಂದ

ಉದ್ಧವನೊಡನೆ ಗೋಪಿಯರು ಮಾತನಾಡುತ್ತಿರಬೇಕಾದರೆ, ಅಲ್ಲಿಗೆ ಒಂದು ದುಂಬಿ ಝೇಂಕರಿಸುತ್ತ ಬರುತ್ತದೆ. ಗೋಪಿಯೊಬ್ಬಳು ಅದನ್ನು ಸಂಬೋಧಿಸಿ ಅದು ಕೃಷ್ಣನ ದೂತನಿರಬೇಕೆಂದು ಭಾವಿಸಿ, ಪರಮಾತ್ಮನು ಗೋಪಿಕಾಸ್ತ್ರೀಯರನ್ನು ಕಾಪಾಡಲು ಹೋದನು ಎನ್ನುವುದನ್ನು ತಿಳಿಸಿಕೊಡುತ್ತವೆ. ರಚನೆಗಳಲ್ಲಿ ಕೀರ್ತನೆ, ಸುಳಾದಿ, ಉಗಾಭೋಗ, ವೃತ್ತನಾಮ ಮತ್ತು ದಂಡಕಗಳೆಂಬ ಪ್ರಕಾರಗಳು ಬರುತ್ತವೆ. ದಂಡಕವೊಂದನ್ನು ಬಿಟ್ಟು ಉಳಿದುದೆಲ್ಲವೂ ಸಂಗೀತದ ತಳಹದಿಯ ಮೇಲೆ ರಚಿತವಾಗಿರುವ ಪ್ರಕಾರಗಳು.

**3) ವ್ಯಾಸರಾಜರು:**

ವ್ಯಾಸರಾಜರು ವಿಜಯನಗರದ ರಾಜಗುರುಗಳು, ಮಾಧ್ವ ದಾರ್ಶನಿಕರು ಮತ್ತು ಮಹಾನ್ ವಿದ್ವಾಂಸರಾಗಿದ್ದರು. ಇವರು 15ನೇ ಶತಮಾನದಲ್ಲಿ ಜನಿಸಿ ಕೃಷ್ಣದೇವರಾಯನ ಕಾಲದಲ್ಲಿ ಸಮಾಜ, ಧರ್ಮ ಮತ್ತು ಸಾಹಿತ್ಯಕ್ಕೆ ಅಪಾರ ಕೊಡುಗೆ ನೀಡಿದರು. ಇವರು ದಾಸಪರಂಪರೆಯ ಪ್ರಮುಖ ವ್ಯಕ್ತಿಯಾಗಿ ಪುರಂದರದಾಸರು ಹಾಗೂ ಕನಕದಾಸರಿಗೆ ದೀಕ್ಷೆಯನ್ನು ನೀಡಿ, 740ಕ್ಕೂ ಹೆಚ್ಚು ವಿಷ್ಣುಮೂರ್ತಿಗಳನ್ನು ಪ್ರತಿಷ್ಠಾಪಿಸಿ, ಅನೇಕ ಕೆರೆಗಳನ್ನು ಕಟ್ಟಿಸಿ (ವ್ಯಾಸಸಮುದ್ರ ಕೆರೆ ನಿರ್ಮಿಸಿ), ತಮ್ಮ ತತ್ವಶಾಸ್ತ್ರದ ಗ್ರಂಥಗಳ ಮೂಲಕ ಹಿಂದೂ ಧರ್ಮವನ್ನು ಬಲಪಡಿಸಿದರು.

ವ್ಯಾಸರಾಯರ ಕೀರ್ತನೆಗಳ ಸಾರಾಂಶ: ದ್ವೈತತತ್ವದ ಆಧಾರದ ಮೇಲೆ ಹರಿಯನ್ನು ಪರಮಾತ್ಮನಾಗಿ ಸ್ತುತಿಸುವುದು, ಸಾಮಾನ್ಯ ಜನರಿಗೆ ಕನ್ನಡದಲ್ಲಿ ಹರಿಯ ನಾಮ, ಸ್ಮರಣೆ ಮತ್ತು ಭಕ್ತಿಯ ಮಹತ್ವವನ್ನು ತಿಳಿಸುವುದು ಮತ್ತು ಭಕ್ತಿ, ಶ್ರವಣ, ಕೀರ್ತನ, ಸ್ಮರಣೆಗಳ ಮೂಲಕ ಮುಕ್ತಿಯನ್ನು ಸಾಧಿಸಲು ಮಾರ್ಗದರ್ಶನ ನೀಡುವುದು ಮುಖ್ಯವಾಗಿವೆ. ಅವರ ಕೃತಿಗಳು ಹರಿಯ ಸೇವೆಯ ಫಲವನ್ನು ಒತ್ತಿ ಹೇಳುತ್ತವೆ ಮತ್ತು ಭಕ್ತರಿಗೆ ದೇವರ ಸಾಕ್ಷಾತ್ಕಾರದ ಮಾರ್ಗವನ್ನು ತೋರಿಸುತ್ತವೆ. ಆತ್ಮ ಮತ್ತು ಪರಮಾತ್ಮರ ಬೇರ್ಪಡುವಿಕೆಯನ್ನು ಒಪ್ಪುವ ದ್ವೈತ ತತ್ವವನ್ನು ತಮ್ಮ ಕೀರ್ತನೆಗಳ ಕೇಂದ್ರ ವಿಷಯವಾಗಿಸಿದ್ದಾರೆ. ಪಂಡಿತರಿಗೆ ಮಾತ್ರವಲ್ಲದೆ ಸಾಮಾನ್ಯ ಜನರಿಗೂ ದೇವರ ನಾಮಗಳು ಕನ್ನಡದಲ್ಲೇ ಅರ್ಥವಾಗುತ್ತವೆ ಎಂದು ನಿರೂಪಿಸಿ ಕನ್ನಡ ಭಾಷೆಯಲ್ಲಿಯೇ ಭಕ್ತಿ ನಿರೂಪಿಸಿದರು. ಜನ್ಮ ಜನ್ಮಗಳ ಬಂಧನದಿಂದ ಮುಕ್ತರಾಗಲು ನಿರಂತರ ಹರಿನಾಮ ಸ್ಮರಣೆ ಮತ್ತು ಅಚಲ ಭಕ್ತಿ ಅತ್ಯಗತ್ಯ ಎಂದು ಒತ್ತಿ ಹೇಳುತ್ತಾರೆ. ಹರಿಚರಿತ್ರೆ ಶ್ರವಣ, ಹರಿನಾಮ ಕೀರ್ತನ ಮತ್ತು ಹರಿಪಾದ ಸೇವೆಯು ಭವರೋಗಕ್ಕೆ ಔಷಧಿಯಾಗಿದ್ದು, ಮುಕ್ತಿ ಸಾಧಿಸಲು ದಾರಿ ಎಂದು ವಿವರಿಸುತ್ತಾರೆ. ಕಾವ್ಯಗಳನ್ನು ರಾಗಯುಕ್ತವಾಗಿ ಆಲಾಪಿಸುವ ಗಮಕ ಕಲೆಯ ಮೂಲಕ ಭಕ್ತಿಯನ್ನು ಜನರಿಗೆ ತಲುಪಿಸುವ ಸಂಪ್ರದಾಯವನ್ನು ಬೆಂಬಲಿಸಿದರು.

**“ನಾನೆಲ್ಲಿ ಜ್ಞಾನಿಯು ನಾನೆಲ್ಲಿ ಸುಜನನು**
**ಹೀನ ವಿಷಯಗಳುಂಬ ಶ್ವಾನದಂತಿರುವೆ**
**ಈ ಮೂತ್ರದ ಮನೆಗಾಗಿ ಗಾತ್ರ ಬಳಲಿಸಿ**

**ಮದನಸೂತ್ರ ಬೊಂಬೆಯು ಎನಿಸಿ**
**ನೇತ್ರದಿಂದ ಪಾತ್ರದವರನು ನೋಡಿ ಸ್ತೋತ್ರ ಮಾಡುತ..."**

ಎಂಬ ಕೀರ್ತನೆಯು ಮನುಷ್ಯನ ಅಹಂಕಾರವನ್ನು ತೊರೆದು ವಿಷಯಾಸೆಗಳಿಂದ ದೂರವಾಗಿ ಭಗವಂತನ ಭಕ್ತಿಯಲ್ಲಿ ಮುಳುಗಬೇಕು ಎಂದು ತಿಳಿಸುವ ಒಂದು ವಿರಕ್ತಿ ಮತ್ತು ಆತ್ಮಶೋಧನೆಯ ಗೀತೆಯಾಗಿದೆ. ಈ ಕೀರ್ತನೆಯು ಹೀನ ವಿಷಯಗಳಲ್ಲಿ ಮುಳುಗಿರುವವನನ್ನು ನಾಯಿಗೆ ಹೋಲಿಸಿ ಮದನಸೂತ್ರದ ಬೊಂಬೆಯಾಗಿ ನರ್ತಿಸುತ್ತಿರುವ ದುಸ್ಥಿತಿಯನ್ನು ವಿವರಿಸಿ, ನಿಜವಾದ ಜ್ಞಾನ ಮತ್ತು ಸುಜನತ್ವದ ಮಾರ್ಗ ತೋರುತ್ತದೆ.

**"ಮಹಿಮೆ ಸಾಲದೇ ಇಷ್ಟೇ ಮಹಿಮೆ ಸಾಲದೆ**
**ಅಹಿಶಯನನ ಒಲುಮೆಯಿಂದ ಮಹಿಯೊಳೆಮ್ಮ ಶ್ರೀಪಾದರಾಯರ"**

ಎಂಬ ಪದ್ಯವು ವ್ಯಾಸತೀರ್ಥರು ತಮ್ಮ ಗುರುಗಳಾದ ಶ್ರೀಪಾದರಾಜರ ಅಪಾರ ಮಹಿಮೆಯನ್ನು ಕೊಂಡಾಡಲು ರಚಿಸಿದ ಪದ್ಯವಾಗಿದೆ. ದೇವರ ಮತ್ತು ಗುರುಗಳ ಮಹಿಮೆಯು ಹೇಳಲಾಗದಷ್ಟು ಅಗಾಧವಾದುದು. ಶ್ರೀಪಾದರಾಜರು ಬ್ರಹ್ಮಹತ್ಯೆ ದೋಷವನ್ನು ಪರಿಹರಿಸಿದ್ದು ಮತ್ತು ಕೃಷ್ಣನ ಕರುಣೆಯಿಂದ ಕಾಯಿಗಳನ್ನು ಹಸಿಯಾಗಿಸಿದ್ದು ಅವರ ಮಹಿಮೆಗೆ ಸಾಕ್ಷಿಯೆಂದಿದೆ. ಶ್ರೀಪಾದರಾಜರ ದೈವಿಕ ಶಕ್ತಿ ಮತ್ತು ಮಹಿಮೆಯು ವರ್ಣನಾತೀತವಾದುದು.

**4) ವಾದಿರಾಜರು:**

ಕನ್ನಡ ಹರಿದಾಸ ಪಂಥದ ಪ್ರಮುಖರಲ್ಲೊಬ್ಬರು. ವ್ಯಾಸರಾಯರ ಪ್ರಮುಖ ಶಿಷ್ಯರಲ್ಲಿ, ಸೋದೆಯ ಮಠಾಧಿಪತಿಗಳಾಗಿದ್ದ ವಾದಿರಾಜರು ಒಬ್ಬರು. ಕನ್ನಡ ಮತ್ತು ಸಂಸ್ಕೃತ ಭಾಷೆಗಳಲ್ಲಿ ಅಪಾರ ಪಾಂಡಿತ್ಯವನ್ನು ಪಡೆದಿದ್ದರು. ಇವರ ಕವಿತೆಗಳು ತರ್ಕಬದ್ಧವಾದುವು. ಇವರ ವಾಗ್ವೈಖರಿಯನ್ನು ಮೆಚ್ಚಿದ ವಿಜಯನಗರ ಸಾಮ್ರಾಜ್ಯದ ರಾಜ ಕೃಷ್ಣದೇವರಾಯನು ಇವರಿಗೆ 'ಪ್ರಸಂಗಾಭರಣತೀರ್ಥ' ಎಂಬ ಬಿರುದನ್ನು ಕೊಟ್ಟು ಗೌರವಿಸಿದನು. ಶ್ರೀಹರಿಭಕ್ತಿಯನ್ನು ಕೀರ್ತನೆಗಳ ಮೂಲಕ ಜನಸಾಮಾನ್ಯರಿಗೆ ತಿಳಿಗನ್ನಡದಲ್ಲಿ ಸರಳವಾಗಿ ಅರ್ಥವಾಗುವಂತೆ ಮಾಡಿದರು. ಅಷ್ಟಮಠಗಳಲ್ಲಿ ಈಗ ನಡೆಯುವ ಪರ್ಯಾಯೋತ್ಸವ ಪದ್ಧತಿಯನ್ನು ಪ್ರಾರಂಭಿಸಿದರು.

ವಾದಿರಾಜರ ಇಷ್ಟದೈವ ಶ್ರೀಹರಿ. ದೇವರು ವಾದಿರಾಜರಿಗೆ ಹಯವದನ ಅಥವಾ ಕುದುರೆಯ ರೂಪದಲ್ಲಿ ದರ್ಶನ ಕೊಟ್ಟನಂತೆ. ತಮ್ಮ ಎಂಟನೆಯ ವಯಸ್ಸಿನಲ್ಲಿ ಸನ್ಯಾಸಾಶ್ರಮವನ್ನು ಸ್ವೀಕರಿಸಿದ ವಾದಿರಾಜರ ಸನ್ಯಾಸದ ಜೀವನಾವಧಿ 112 ವರ್ಷಗಳು. ಕನ್ನಡದಲ್ಲಿ 'ಹಯವದನ' ಎಂಬ ಅಂಕಿತದಲ್ಲಿ ಅನೇಕ ದೇವರನಾಮಗಳು, ಕೀರ್ತನೆಗಳು, ಸುಳಾದಿ, ಉಗಾಭೋಗಗಳನ್ನು ರಚಿಸಿದ್ದಾರೆ. ಶಾಸ್ತ್ರೀಯ ಯುಕ್ತಿಗಳನ್ನು ಸಾಹಿತ್ಯ ಮುದ್ರೆಯಿಂದ ಮನಸ್ಸಿಗೆ ನೆಡುವಂತೆ ಸರಳವಾದ ಪ್ರೌಢ ಕನ್ನಡ ನುಡಿಯಲ್ಲಿ, ಮುಖ್ಯ ಪ್ರಮೇಯವಾದ ಭಕ್ತಿಯಿಂದ ಶ್ರೀಹರಿಯನ್ನು ಒಲಿಸಿ ಮುಕ್ತಿಯನ್ನು ಪಡೆಯಬೇಕೆಂದು ಸಿದ್ಧಾಂತಿಸಿದ್ದಾರೆ.

ಶ್ರೀವಾದಿರಾಜರು ರಚಿಸಿದ ಮಂಗಳಕರವಾದ ಕೃತಿ ಮತ್ತು ಸ್ತುತಿಗೀತೆಯೆಂದರೆ 'ಲಕ್ಷ್ಮೀಶೋಭಾನೆ'. ಇದು ಲಕ್ಷ್ಮೀದೇವಿಯ ವಿವಾಹದ ಸಂದರ್ಭವನ್ನು ವರ್ಣಿಸುತ್ತದೆ ಮತ್ತು ಮನೆಗೆ ಶಾಂತಿ, ಸಮೃದ್ಧಿ, ಸೌಭಾಗ್ಯ ತರುತ್ತದೆ ಎಂದು ನಂಬಲಾಗಿದೆ. ಮದುವೆ, ಶುಭಕಾರ್ಯಗಳಲ್ಲಿ ಹಾಡುವುದರಿಂದ ವಧು–ವರನಿಗೆ ಸುಖದಾಂಪತ್ಯ ಅಭಿಸುತ್ತದೆ ಎಂದು ಭಾವಿಸಲಾಗಿದೆ ಹಾಗೂ ಕೇಳುವವರಿಗೆ ಅಪೇಕ್ಷಿತ ಫಲಗಳು ಸಿಗುತ್ತವೆ. ಇದು ಧನಕ್ಕೆ ಮಾತ್ರವಲ್ಲ, ದೀರ್ಘಾಯುಷ್ಯವನ್ನು ನೀಡಬಲ್ಲ ಶಕ್ತಿಯನ್ನು ಹೊಂದಿದೆ. ವಾದಿರಾಜರು ಲಕ್ಷ್ಮೀಶೋಭಾನೆಯನ್ನು ರಚಿಸಿ ಹಾಡಿದಾಗ ಲಕ್ಷ್ಮೀದೇವಿಯು ಪ್ರಸನ್ನಳಾಗಿ, ಮೃತನಾಗಿದ್ದ ವರನಿಗೆ ಪುನರುಜ್ಜೀವನ ನೀಡಿ ಮದುವೆ ನೆರವೇರಿಸಿದಳು ಎಂದು ಹೇಳಲಾಗುತ್ತದೆ.

**5) ವ್ಯಾಸತತ್ವಜ್ಞತೀರ್ಥರು:**

ಸುಮಾರು 300 ವರ್ಷಗಳ ಹಿಂದೆ ಜೀವಿಸಿದ್ದ ಮಹಾನ್ ಸಂತರು. ವಿದ್ವಾಂಸರು ಮತ್ತು ದ್ವೈತವೇದಾಂತಿಗಳಾಗಿದ್ದು, ತಮ್ಮ ತಪಃಶಕ್ತಿ ಮತ್ತು ಜ್ಞಾನದಿಂದ ರಾಜನಿಗೆ ಸಹಾಯ ಮಾಡಿ, ಹಲವು ಕೃತಿಗಳನ್ನು ರಚಿಸಿ ಶ್ರೀಮಠಗಳ ಪರಂಪರೆಯಲ್ಲಿ ಪ್ರಮುಖರಾಗಿದ್ದರು. ಶ್ರೀರಾಘವೇಂದ್ರ ಸ್ವಾಮಿ ಮಠದ ಪರಂಪರೆಯಲ್ಲಿ ಗುರುಗಳಾಗಿ ಸೇವೆ ಸಲ್ಲಿಸಿದ್ದು, 'ಶ್ರೀವಾಸುದೇವವಿಠಲ' ಎಂಬ ಅಂಕಿತದಿಂದ ಅನೇಕ ಪದ, ಪದ್ಯ, ಸುಳಾದಿಗಳನ್ನು ರಚಿಸಿ ದಾಸಸಾಹಿತ್ಯವನ್ನು ಶ್ರೀಮಂತಗೊಳಿಸಿದರು.

**"ನಾನ್ಯಾಕೆ ಚಿಂತಿಸಲಿ ನಾನ್ಯಾಕೆ ಧೇನಿಸಲಿ"**

ಎಂಬ ಪದ್ಯವು ರಾಘವೇಂದ್ರ ಸ್ವಾಮಿಗಳ ಕೃಪೆ ಮತ್ತು ಮಾರ್ಗದರ್ಶನದ ಮಹತ್ವವನ್ನು ಹೇಳುತ್ತದೆ. ಭಕ್ತನು ಚಿಂತಿಸಬೇಕಿಲ್ಲ, ಗುರು ಕರುಣೆಯಿಂದ ರಕ್ಷಿಸುವುದರಿಂದ ಜೀವನದಲ್ಲಿ ಯಾವುದೇ ಕಷ್ಟಗಳಿದ್ದರೂ ಆತನೇ ನಮ್ಮನ್ನು ಕಾಪಾಡುತ್ತಾನೆ ಎಂದು ಭಕ್ತಿಯಿಂದ ಸ್ಮರಿಸುವ ಭಾವಗೀತೆಯಾಗಿದೆ. ರಾಘವೇಂದ್ರ ಗುರುಗಳು ತಮ್ಮ ಕರುಣೆಯಿಂದ ಭಕ್ತನ ಕೈಹಿಡಿದ ಮೇಲೆ ಭಕ್ತನು ಯಾವುದೇ ಚಿಂತೆ ಮಾಡಬೇಕಾಗಿಲ್ಲ. ಗುರುಗಳ ಅನುಗ್ರಹದಿಂದ ಜೀವನದ ಎಲ್ಲ ಕಷ್ಟಗಳನ್ನು ಜಯಿಸಿ ಆನಂದದಿಂದ ಬಾಳಬಹುದು ಎಂಬ ದೃಢನಂಬಿಕೆ ಮತ್ತು ಭಕ್ತಿಯನ್ನು ಇದು ವ್ಯಕ್ತಪಡಿಸುತ್ತದೆ.

**ಉಪಸಂಹಾರ:**

ಹರಿದಾಸ ಸಾಹಿತ್ಯವನ್ನು ಮೊಟ್ಟಮೊದಲಿಗೆ ದ್ವಾದಶ ಸ್ತೋತ್ರಗಳನ್ನು ರಚನೆ ಮಾಡುವುದರ ಮೂಲಕ ಬೆಳಗಿದವರು ಶ್ರೀಮದಾಚಾರ್ಯರು. ಕನ್ನಡದಲ್ಲಿ ಆಚಾರ್ಯರು ಯಾವುದೇ ಕೃತಿಗಳನ್ನು ಬರೆಯದಿದ್ದರೂ, ಅವರ ಪ್ರಭಾವಕ್ಕೆ ಸಿಕ್ಕ ನರಹರಿತೀರ್ಥರು, ಶ್ರೀಪಾದರಾಜರು, ವ್ಯಾಸತೀರ್ಥರು ಮುಂತಾದವರು ಉತ್ತಮವಾದ ಕನ್ನಡದಲ್ಲಿ ದೇವರ ನಾಮಗಳ ಸೃಷ್ಟಿಗೆ ಕಾರಣರಾದರು. ಆದ್ದರಿಂದ ಹರಿದಾಸ ಸಾಹಿತ್ಯವನ್ನು ಅಧ್ಯಯನ ಮಾಡಬೇಕಾಗಿದ್ದರೆ ಮಾಧ್ವ ಯತಿಗಳ ಪರಂಪರೆಯನ್ನು

ಪರಿಚಯ ಮಾಡಿಕೊಳ್ಳುವುದು ಅನಿವಾರ್ಯ.

**ಪರಾಮರ್ಶನ ಗ್ರಂಥಗಳು:**


1. ವರದರಾವ್ ಜಿ., (1987), ಶ್ರೀಪಾದರಾಜರ ಕೃತಿಗಳು, ಮೈಸೂರು: ಕನ್ನಡ ಅಧ್ಯಯನ ಸಂಸ್ಥೆ.
2. ಅರಳುಮಲ್ಲಿಗೆ ಪಾರ್ಥಸಾರಥಿ, (2006), ವಾದಿರಾಜ ಸಂಪುಟ, ಬೆಂಗಳೂರು: ಅರಳುಮಲ್ಲಿಗೆ ಪ್ರಕಾಶನ (ಅಥವಾ ಹಂಸಧ್ವನಿ ಪ್ರಕಾಶನ).
3. ವಿದ್ವಾನ್ ಕೆ. ಹಯವದನ ಪುರಾಣಿಕರು, (2004), ಶ್ರೀ ಲಕ್ಷ್ಮೀಶೋಭನ ಪದ, ಬೆಂಗಳೂರು: ಶ್ರೀ ಆನಂದತೀರ್ಥ ಪ್ರತಿಷ್ಠಾನ.
4. ಶ್ರೀನಿವಾಸ ಮಠದ, (2008), ದಾಸ ಸಾಹಿತ್ಯ ಸೌರಭ, ವಿಜಯಪುರ: ಗೀತಾ ಪ್ರಕಾಶನ.
5. ಶ್ರೀ ಮನೋಹರ ಜೋಶಿ, (2010), ಹರಿದಾಸ ಸಾಹಿತ್ಯ ಬೆಳೆಸಿದ ನರಹರಿತೀರ್ಥರು, ಧಾರವಾಡ: ಸಮಾಜ ಪುಸ್ತಕಾಲಯ.